ಹೂವುಗಳು ಮತ್ತು ನಾನು

ಮನೋರಮಾ ಜಾಫ

ಅನುವಾದ: ಡಾ. ಪಿ.ಎಸ್. ಚಿಕ್ಕಣ್ಣಯ್ಯ





ISBN 978-81-237-0788-4

ಮೊದಲ ಮುದ್ರಣ : 1991 (ಶಕ 1913)
ನಾಲ್ಕನೆಯ ಮರುಮುದ್ರಣ : 2015 (ಶಕ 1937)
© ಮನೋರಮಾ ಜಾಫ, 1986
Flowers and I (*English*)
Hoovugalu Mattu Nanu (*Kannada*)
₹ 40.00
ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ನೆಹರೂ ಬಾಲ ಪುಸ್ತಕಾಲಯ

ಹೂವುಗಳು ಮತ್ತು ನಾನು

ಮನೋರಮಾ ಜಾಥ   ಅನುವಾದ: ಡಾ॥ ಪಿ.ಎಸ್. ಚಿಕ್ಕಣ್ಣಯ್ಯ

ಚಿತ್ರಗಳು: ಜಯಾ ರಸ್ತೋಗಿ ವೀಟನ್ * ಸುಧೀರ್ ಕಾಸ್ಲಿವಾಲ್



nbt.india
एक: सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಮೋಹನ್ ಅಂಚೆಚೀಟಿಗಳನ್ನು ಸಂಗ್ರಹಿಸುತ್ತಾನೆ.
ರೀಟ ಹಕ್ಕಿ ಪುಕ್ಕಗಳನ್ನು ಕೂಡಿಡುತ್ತಾಳೆ.
ಸೋಹನ್ ಕಪ್ಪೆಚಿಪ್ಪುಗಳನ್ನು ಸೇರಿಸುತ್ತಾನೆ.
ಜೀನತ್ ನಾಣ್ಯಗಳನ್ನು ಶೇಖರಿಸುತ್ತಾಳೆ.
ನಾನು ಬೇರೆ ಯಾವುದಾದರೊಂದನ್ನು ಕೂಡಿಡಬೇಕು.
ಹೌದು, ನಾನು ಹೂವುಗಳನ್ನು ಸಂಗ್ರಹಿಸುತ್ತೇನೆ.



ನಾನು ನನ್ನ ತೋಟಕ್ಕೆ ಹೋಗುತ್ತೇನೆ. ನಾನು ಅಲ್ಲಿ ಗುಲಾಬಿ ಚೆಂಡು, ಪಾಪಿಸ್, ಘಮಘಮಿಸುವ ಪೀಸ್ (ಬಟಾಣಿ), ಪ್ಯಾನ್ಸಿ, ಮತ್ತು ದಾಸವಾಳ ಹೂವುಗಳನ್ನು ನೋಡುತ್ತೇನೆ. ಈ ಎಲ್ಲಾ ಜಾತಿಯ ಒಂದೊಂದು ಹೂವನ್ನು ನಮ್ಮ ತಂದೆಯ ನಿಘಂಟಿನಲ್ಲಿ ಒತ್ತಿಡುತ್ತೇನೆ.



ನಮ್ಮ ಮನೆಯವರ ತೋಟದಲ್ಲಿ ಬಣ್ಣಬಣ್ಣದ ಕಾಸ್‌ಮಾಸ್, ಹಲವಾರು ಜಾತಿಯ ಜಿನಿಯ ಮತ್ತು ಪಿಂಕ್ಸ್ ಹೂವುಗಳಿವೆ. ನಾನು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ತೋಟದೊಳಗೆ ಹೋಗುತ್ತೇನೆ. ನನ್ನನ್ನು ಮಾಲಿಯು ಹೂವು ಕೀಳುತ್ತಿರುವಾಗಲೆ ಹಿಡಿಯುತ್ತಾನೆ. ಮನೆಯವರು ಇದನ್ನು ನೋಡಿ ಕೂಡಲೆ ಅಲ್ಲಿಗೆ ದಾವಿಸುತ್ತಾರೆ. ನಾನು ನನ್ನ ಹವ್ಯಾಸವನ್ನು ಅವರಿಗೆ ಹೇಳುತ್ತೇನೆ. ಅವರು ನನಗೆ ತುಂಬ ಪ್ಲಾಕ್ಸ್, ಸ್ನ್ಯಾಪ್ ಡ್ರಾಗನ್ ಮತ್ತು ದೊಡ್ಡಬಿಂದಿಗೆ ಹೂವುಗಳನ್ನು ಕೊಡುತ್ತಾರೆ. ನಾನು ಅವುಗಳನ್ನು ಸಂತೋಷವಾಗಿ ನಮ್ಮ ಮನೆಗೆ ತಂದು ಪುಸ್ತಕಗಳಲ್ಲಿ ಒತ್ತಿಡುತ್ತೇನೆ.




ಸ್ನ್ಯಾಪ್‌ಡ್ರಾಗನ್
ಉಗುಣೆ ಜಾತಿಯ ಹೂವು
ದೊಡ್ಡಬಿಂದಿಗೆ

ಒಂದು ದಿವಸ ಸ್ಕೂಲಿಗೆ ಹೋಗುವ ದಾರಿಯಲ್ಲಿ ನಾನು ಪ್ರಕಾಶಮಾನವಾದ ಸೂರ್ಯಕಾಂತಿ, ಸೊಗಸಾದ ಬಿಳಿಸಂಪಿಗೆ ಮತ್ತು ಬಲೆಯಾಕಾರದ ಲಿಲಿ ಹೂವುಗಳನ್ನು ನೋಡುತ್ತೇನೆ. ನನ್ನ ಚೀಲವನ್ನು ಅಲ್ಲಿಯೆ ಬಿಟ್ಟು ಈ ಅಂದವಾದ ಹೂವುಗಳನ್ನು ಪಡೆಯುತ್ತೇನೆ.




ಜಟ್ರೋಪ
(ಕಾಡು ಅವಡಲು)



ಒಂದು ದಿನ ನಮ್ಮಮ್ಮ "ರವಿ, ಮರದಲ್ಲಿ ಬಿಡುವ ಹೂವಗಳನ್ನು ನೀನು ಏತಕ್ಕೆ ಕೂಡಿಡಬಾರದು" ಎಂದು ಕೇಳುತ್ತಾಳೆ. ನಾನು ಅಂದಿನಿಂದ ಕೆಂಪು ಬೂರಗ, ಮುತ್ತುಗ, ಹಳದಿ ಕೆಕ್ಕೆ ಮತ್ತು ಕಂಚವಾಳ ಹೂವುಗಳನ್ನು ಶೇಖರಿಸುತ್ತೇನೆ. ಅವುಗಳನ್ನು ನನ್ನ ದಪ್ಪ ಪುಸ್ತಕದಲ್ಲಿ ಒತ್ತಿಡುತ್ತೇನೆ. ಇದೆ ರೀತಿ ವರ್ಷದಲ್ಲಿ ಹತ್ತು ತಿಂಗಳು ಹೂವುಗಳನ್ನು ಸಂಗ್ರಹಿಸುತ್ತೇನೆ. ನನಗೆ ಕೈವೆಚ್ಚಕ್ಕೆ ಕೊಟ್ಟ ಹಣವನ್ನುಳಿಸಿ ಐದು ಚಿತ್ರಸಂಪುಟಗಳನ್ನು (ಆಲ್ಬಮ್) ಕೊಳ್ಳುತ್ತೇನೆ.




ಕಂಚವಾಳ
ಕೆಂಪು ಬೂರಗ

ಒಂದು ಚಿತ್ರಸಂಪುಟದಲ್ಲಿ ಆಯಾಕಾಲದ ಪಾಪಿ, ಪ್ಯಾನ್ಸಿ ಮತ್ತು ಘಮಘಮಿಸುವ ಬಣ್ಣಬಣ್ಣದ ಪೀಸ್ (ಬಟಾಣಿ) ಹೂವ್ವಗಳನ್ನು ಅಂಟಿಸುತ್ತೇನೆ. ಇನ್ನೊಂದು ಚಿತ್ರ ಸಂಪುಟದಲ್ಲ ದೊಡ್ಡ ಹಸಿರು ಮರಗಳಾದ ಕೆಂಪು ಬೂರಗ ಮತ್ತು ಕಂಚಿವಾಳ ಹೂವುಗಳನ್ನು ಹಚ್ಚುತ್ತೇನೆ. ಮೂರನೇ ಚಿತ್ರಸಂಪುಟದಲ್ಲಿ ಕಂಟೆ ಅಥವಾ ಪೊದರ ಗಿಡಗಳ ಲೇಕ ಮತ್ತು ಕೆಂಪು ಕಣಿಗಲ ಹೂವುಗಳನ್ನಿಡುತ್ತೇನೆ.



ನಾಲ್ಕನೆ ಚಿತ್ರಸಂಪುಟದಲ್ಲಿ ಅಸ್ಸಾಂನ ವೈಶಿಷ್ಟ್ಯತೆಯುಳ್ಳ ಚಿತ್ರ ವಿಚಿತ್ರ ಆರ್ಕಿಡ್ ಅಥವ ಸೀತೆಜಡೆ ಮತ್ತು ಕಾಶ್ಮಿರ್ ಕೇಸರಿ ಹೂವುಗಳಿರುಸುತ್ತೇನೆ. ಐದನೆ ಚಿತ್ರಸಂಪುಟದಲ್ಲಿ ಸುವಾಸನೆ ಬೀರುವ ಮಲ್ಲಿಗೆ ಮತ್ತು ರಾತ್ರಿರಾಣಿ ಹೂವುಗಳಿಡುತ್ತೇನೆ. ಈ ಹೂವುಗಳನ್ನು ನಾಜೋಕಾಗಿ ಮತ್ತು ನಯವಾಗಿರಿಸುತ್ತೇನೆ. ಈ ಚೆಂದದ ಹೂವುಗಳ ಹೆಸರು, ಅವು ಸಿಕ್ಕುವ ಜಾಗ ಮತ್ತು ಅವುಗಳ ವಿಶೇಷ ಲಕ್ಷಣಗಳನ್ನು ಬರೆಯಲು ನನಗೆ ತುಂಬ ಆಸೆ.



ವಸಂತ ಕಾಲದಲ್ಲಿ ಒಂದು ದಿನ ನಾನು ಮತ್ತು ನನ್ನ ಗೆಳೆಯರು ಒಂದು ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತೇವೆ. ಅಲ್ಲಿಗೆ ನಮ್ಮ ನಮ್ಮ ಸಂಗ್ರಹಗಳನ್ನು ತರುತ್ತೇವೆ.



ಮೋಹನ್ ತಾನು ಒಟ್ಟುಗೂಡಿಸಿದ ಸುಂದರವಾಗಿರುವ ಅಂಚೆಚೀಟಿಗಳನ್ನು ತರುತ್ತಾನೆ. ಇವುಗಳಲ್ಲಿ ಕೆಲವು ಈಗಿನವು, ಕೆಲವು ಹಿಂದಿನವು. ಕೆಲವು ಭಾರತ ದೇಶದವು, ಕೆಲವು ಇಂಗ್ಲೆಂಡ್, ಅಮೇರಿಕ ಮತ್ತು ಕೆನಡ ಮುಂತಾದ ಹೊರದೇಶದವು.





ಗುಬ್ಬಚ್ಚಿ ಪುಕ್ಕಗಳನ್ನು ರೀಟ ತೆಗೆದುಕೊಂಡು ಬರುತ್ತಾಳೆ. ಇವುಗಳಲ್ಲಿ ಕೆಲವು ಚಿಕ್ಕವು, ಕೆಲವು ದೊಡ್ಡವು. ಇವಲ್ಲದೆ ನವಿಲು, ಉಷ್ಟ್ರಪಕ್ಷಿ ಮತ್ತು ಇತರೆ ಪಕ್ಷಿಗಳ ಪುಕ್ಕಗಳೂ ಸಹ ಇವೆ.



ಸೋಹನ್ ತನ್ನ ಕಪ್ಪೆಚಿಪ್ಪಿನ ಸಂಗ್ರಹಣೆಯನ್ನು ತೋರಿಸುತ್ತಾನೆ. ಇವುಗಳಲ್ಲಿ ಕೆಲವು ದೊಡ್ಡವು ಮತ್ತು ಕೆಲವು ಸಣ್ಣವು. ಕೆಲವು ಬಿಳುಪಿನಿಂದ ಹೊಳೆಯುತ್ತವೆ. ಕೆಲವು ನಾನಾಕಾರ ಮತ್ತು ಹಲವಾರು ವಿನ್ಯಾಸವನ್ನು ಹೊಂದಿರುತ್ತವೆ.







ಜೀನತ್ ತನ್ನ ನಾಣ್ಯಗಳನ್ನು ತೋರಿಸುತ್ತಾಳೆ. ಇವುಗಳಲ್ಲಿ ಕೆಲವು ಬೆಳ್ಳಿನಾಣ್ಯಗಳು, ಕೆಲವು ಹಿತ್ತಾಳೆಯವು. ಅವುಗಳಲ್ಲಿ ಕೆಲವು ಗುಂಡಾಕಾರವಾಗಿ, ಕೆಲವು ಚೌಕಟ್ಟಾಕಾರವಾಗಿ ಮತ್ತೆ ಕೆಲವು ಆರು ಕೋಣಾಕಾರಗಳಾಗಿವೆ. ಕೆಲವು ನಾಣ್ಯಗಳು ಸಣ್ಣವು ಮತ್ತು ಕೆಲವು ದೊಡ್ಡವು. ಕೆಲವು ನಾಣ್ಯಗಳು ಹಳೆಯ ಕಾಲದವು, ಕೆಲವು ಈಗಿನವು.



ನನ್ನ ಸರದಿ ಬಂದಾಗ
ನಾನು ನನ್ನ ಐದು ಚಿತ್ರಸಂಪುಟಗಳನ್ನು
ಒಂದೊಂದಾಗಿ ತೋರಿಸುತ್ತೇನೆ.



ನಾನು ಬಹಳ ಅಚ್ಚುಕಟ್ಟಾಗಿ ಒತ್ತಿರುವ ಹೂವುಗಳನ್ನು ತೋರಿಸುತ್ತೇನೆ. ಈ ಹೂವುಗಳ ಹೆಸರು ಮತ್ತು ಬೆಳೆಯುವ ಜಾಗವನ್ನು ಬರೆದಿರುವ ಟಿಪ್ಪಣಿ ಸಹಿತ ಇವುಗಳನ್ನು ತೋರಿಸುತ್ತೇನೆ.





ಗಣೆ ಕೊಕ್ಕಿನ ಹೂವು

ಗೆಳೆಯರು ನನ್ನ ಸಂಗ್ರಹವನ್ನು ನೋಡುತ್ತಾರೆ. ಎಷ್ಟು ಆಕರ್ಷಣೆಯಾಗಿದೆ ಎನ್ನುತ್ತಾಳೆ ರೀಟ. ತುಂಬ ಸೊಗಸಾದ ಸಂಗ್ರಹ ಎಂದು ಮೋಹನ್ ಹೇಳುತ್ತಾನೆ. ಮಹಾ ಬುದ್ಧಿವಂತನೆಂದು ಜೀನತ್ ಹೊಗಳುತ್ತಾಳೆ. ಇಂಥ ಹೊಸ ಹವ್ಯಾಸವನ್ನು ತುಂಬ ಮೆಚ್ಚುತ್ತೇನೆಂದು ಸೋಹನ್ ತಿಳಿಸುತ್ತಾನೆ. ರವಿಯ ಹಾಗೆ ನಮ್ಮ ಸಂಗ್ರಹಗಳನ್ನು ಜೋಪಾನವಾಗಿಡೋಣ ಎಂದು ರೀಟ ಸಲಹೆ ಕೊಡುತ್ತಾಳೆ.



ಉಗುಣೆ ಜಾತಿಯ ಹೂವು

ಮೋಹನ್ ಅಂಚೆಚೀಟಿಗಳ ಚಿತ್ರಸಂಪುಟವನ್ನು, ರೀಟ ಪುಕ್ಕಗಳ ಚಿತ್ರಸಂಪುಟವನ್ನು, ಜೀನತ್ ನಾಣ್ಯಗಳ ಚಿತ್ರಸಂಪುಟವನ್ನು ನನ್ನ ಹಾಗೆ ತಯಾರು ಮಾಡುತ್ತಾರೆ. ಸೋಹನ್ ತನ್ನ ಕಪ್ಪೆಚಿಪ್ಪುಗಳನ್ನು ಒಂದು ಪ್ರದರ್ಶನ ಪೆಟ್ಟಿಗೆಯಲ್ಲಿಡುತ್ತಾನೆ. ಈ ಎಲ್ಲಾ ವಿವಿಧ ಸಂಗ್ರಹಗಳನ್ನು ಸೋಹನ್ ಮನೆಯ ಒಂದು ಕೋಣೆಯಲ್ಲಿ ನಾವು ಈಗ ಜೋಡಿಸಿಟ್ಟಿದ್ದೇವೆ. ಇದೇ ನಮ್ಮ ಪುಟಾಣಿ ಸಂಗ್ರಹಾಲಯ.



Printed at: Gopsons Papers Ltd., Noida



nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 40.00
ISBN 812370788-6
9788123707884
15160297
Flowers and I (Kannada)

